# ಪ್ರಥಮ ದರ್ಜೇ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No. 7/2026**

**CW : 01 PW: 01**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 15.04.2026**

| | |
|---|---|
| ಹೆಸರು | : ಸಂಜು ಚೌಹಾಣ |
| ತಂದೆಯ ಹೆಸರು | : ಕೋಬೂ ಚೌಹಾಣ |
| ವಯಸ್ಸು | : 32 |
| ಉದ್ಯೋಗ | : ಕೂಲಿ |
| ವಾಸಸ್ಥಳ | : ತೆಗನೂರು |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾಸಾ-2 ಮತ್ತು 3 ಇವರ ಪರಿಚಯ ನನಗೆ ಇರುತ್ತದೆ. ಚಾಸಾ-4 ನನ್ನ ಹೆಂಡತಿ, ಚಾಸಾ-5 ನನ್ನ ತಾಯಿ, ಚಾಸಾ-6 ನನ್ನ ತಂದೆ, ಚಾಸಾ-7 ನನ್ನ ಅಣ್ಣ, ಚಾಸಾ-8 ನನ್ನ ತಂಗಿ. ಆರೋಪಿತರ ಪರಿಚಯ ನನಗೆ ಇರುವುದಿಲ್ಲ.

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ವೈಯುಕ್ತಿಕ ಮಾಹಿತಿ ಇರುವುದಿಲ್ಲ. ಆರೋಪಿತರು ಗುಂಪು ಕಟ್ಟಿಕೊಂಡು ಅತಿಕ್ರಮ ಪ್ರವೇಶ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಹಾಗೂ ಬಡಿಗೆಯಿಂದ ಹೊಡೆದಿರುವುದಿಲ್ಲ ಹಾಗೂ ಜೀವ ಬೆದರಿಕೆಯನ್ನು ಹೂಡಿರುವುದಿಲ್ಲ ಎಂದು ನಾನು ದೂರು ಹಾಗೂ ಹೇಳಿಕೆ ನೀಡಿರುವುದಿಲ್ಲ. ಪೋಲೀಸರಿಗೆ ಯಾವುದೇ ಪಂಚನಾಮೆಗೆ ಜಾಗೆಯನ್ನು ತೋರಿಸಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿದಾರರಿಗೆ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಿದ್ದು, ಅದಿ ಫಿರ್ಯಾದಿಯಾಗಿದ್ದು, ಅದನ್ನು ನಿ.ಪಿ.1 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.1 (ಎ) ಎಂದು ನಿಶಾನೆಗೊಳಿಸಲಾಯಿತು. ನಿ.ಪಿ.1 ರಲ್ಲಿರುವ ಅಂಶಗಳ ಬಗ್ಗೆ ಮಾಹಿತಿ ಇರುವುದಿಲ್ಲ.

ಒಂದು ಭಾವಚಿತ್ರವನ್ನು ತೋರಿಸಲಾಗಿ, ನಿ.ಪಿ.2 ಎಂದು ನಿಶಾನೆಗೊಳಿಸಲಾಯಿತು. ನಿ.ಪಿ.2 ರಂತೆ ಭಾವಚಿತ್ರವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿ: 19/11/2025 ರಂದು ರಾತ್ರಿ 7.30 ರ ಸುಮಾರಿಗೆ ನಾನು ಮನೆಯಲ್ಲಿ ಇದ್ದಾಗ ಆರೋಪಿತರು ಗುಂಪು ಕಟ್ಟಿಕೊಂಡು ನಮ್ಮ ಮನೆಯಲ್ಲಿ ಅಕ್ರಮ ಪ್ರವೇಶ ಮಾಡಿರುತ್ತಾರೆ ಎಂದು ದೂರು ನೀಡಿರುತ್ತೇನೆ ಸರಿಯಲ್ಲ. ಆರೋಪಿತರು ಚಾಸಾ-7 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ಒಂದನೇ ಆರೋಪಿತನು ತನ್ನ ಕೈಯಲ್ಲಿದ್ದ ಬಡಿಗೆಯಿಂದ ನನ್ನ ಭುಜಕ್ಕೆ ಬೆನ್ನಿಗೆ ಹೊಡೆದು

ಒಳಪೆಟ್ಟು ಮಾಡಿರುತ್ತಾನೆ ಎಂದರೆ ಸರಿಯಲ್ಲ.

ಆರೋಪಿ ನಂ.2 ಮತ್ತು 3 ಇವರು ಕೈಯಿಂದ ಮುಷ್ಟಿ ಮಾಡಿ ಎದೆಗೆ ಹೊಡೆದು ಒಳಪೆಟ್ಟು ಮಾಡಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿ ನಂ.4 ಮತ್ತು 5 ಇವರು ಚಾಸಾ-8 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಖಲ್ಲಾಸ್ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-4 ರಿಂದ 6 ರವರು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಉಪಚಾರ ಕುರಿತು ಜಿಲ್ಲಾಸ್ಪತ್ರೆ ಕಲಬುರಗಿಗೆ ಸೇರಿಕೆ ಆಗಿರುತ್ತೇನೆ ಎಂದರೆ ಸರಿಯಲ್ಲ.

ಈ ಘಟನೆ ಕುರಿತು ನಾನು ನಿ.ಪಿ.1 ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.2 ರಂತೆ ಪೋಲೀಸರಿಗೆ ಪಂಚನಾಮೆಗೆ ಜಾಗೆಯನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ದಿ: 20/11/2025 ರಂದು ಪೋಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ, ಈಗ ಓದಿ ಹೇಳಲಾದ ಹೇಳಿಕೆಯನ್ನು ಸಾಕ್ಷಿಯು ಅಲ್ಲಗಳೆದಿದ್ದು, ಅದನ್ನು ನಿ.ಪಿ.3 ಎಂದು ನಿಶಾನೆಗೊಳಿಸಲಾಯಿತು. ನಿ.ಪಿ.1 ರಿಂದ 3 ರಲ್ಲಿರುವ ಅಂಶಗಳು ತಿಳಿದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಹಿರಿಯರ ಮಧ್ಯಸ್ಥಿಕೆಯಿಂದ ನಾನು ಈ ಪ್ರಕರಣವನ್ನು ಮುಂದುವರೆಸಲು ಇಷ್ಟಪಡುವುದಿಲ್ಲ, ಆರೋಪಿತರ ನಡುವೆ ರಾಜಿ ಮಾಡಿಕೊಂಡಿರುವ ಕಾರಣ ನಾನು ಇದನ್ನು ಇಲ್ಲೇ ಇತ್ಯರ್ಥ ಪಡಿಸಿಕೊಳ್ಳುವುದಾಗಿ ಸಾಕ್ಷಿದಾರರು ಸ್ವ ಇಚ್ಛೆಯಾಗಿ ನುಡಿದಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಏನೂ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ : ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**